Sri M. P. PATIL.—I am very sorry for the ignorance of the Hon'ble Member. There is no Muzrai Department of the Central Government. Muzrai Department was in the old Mysore State and these temples had nothing to do with the Muzrai Department even in the old Mysore State also.

ಶ್ರೀ ಬನಗೌಡ.—ಹೈದರಾಬಾದು ಸರ್ಕಾರದವರು ಈ ದೇವಸ್ಥಾನಗಳಿಗೆ ಹಣ ಮಂಜೂರು ಮಾಡಿದ್ದಾರೆಯೆ ?

Sri M. P. PATIL.—Sir, this question is concerned with the temples which were merged for which the Madras Government had issued orders. For Hyderabad areas, there are separate orders and this supplementary has nothing to do with the main question.

ಶ್ರೀ ಎ. ಮುನಿಯಪ್ಪ.—ಮಾತನಾಡುವ ದೇವತೆಗಳಿಗೆ ಮನೆ ಇಲ್ಲದೇ ಇದ್ದರೂ ಪರವಾಗಿಲ್ಲ, ಮಾತನಾಡದೇ ಇರತಕ್ಕ ಕಲ್ಲು ದೇವರಿಗೆ ಮನೆ ಕಟ್ಟುವುದು ಸೂಕ್ತ ಅಲ್ಲವೇ ?

Mr. SPEAKER.—Order, Order. Such questions should not be put. It is derogatory to the dignity of the House.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ 151 ದೇವಸ್ಥಾನಗಳಿಗೂ ಎಷ್ಟು ಅಂದಾಜು ಆಗಿದೆ ?

ಶ್ರೀ ಎಂ. ಪಿ. ಪಾಟೀಲ್.—ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಎಷ್ಟು ವರ್ಷಗಳಲ್ಲಿ ಇದನ್ನು ಕೊಟ್ಟು ಮುಗಿಸಬೇಕೆಂದು ಮಾಡಿದ್ದೀರಿ ?

ಶ್ರೀ ಎಂ. ಪಿ. ಪಾಟೀಲ್.—ಒಂದು ವರ್ಷದಲ್ಲಿ ಮುಗಿಸಬೇಕೆಂದಿದ್ದೇವೆ

Sri ANNA RAO GANAMUKHI.—May I know whether the Government has consulted the Ecclesiastical Department in preparing the plans for the construction of these temples ?

Sri M. P. PATIL.—Sir, I expect so. Because it was the Madras Government which had passed orders and they must have consulted the Ecclesiastical Department if there was any basis for consulting that Department.

[Sri B. SHAM SUNDAR.—(In Hindi) on page 18 of the annexure, names of temples are given in which there is one name : 'Harijan Temple'. How could that be the name of a temple ?]

Sri M. P. PATIL.—It is printed as Harijan Temple. Possibly it may be a mistake. I cannot reply to that.

ಶ್ರೀ ಎಂ. ಲಿಂಗೇಗೌಡ.—ವಿಲೀನೀಕರಣವಾಗುವ ಸಮಯದಲ್ಲಿ ಆ ಕಡೆಯಿಂದ ಬರತಕ್ಕ ದೇವರನ್ನು ಇಲ್ಲಿಗೆ ಸೇರಿಸಿಕೊಳ್ಳಬೇಕೆಂದು ಅಪ್ಪಣೆ ಆಗಿತ್ತೇ ?

Mr. SPEAKER.—Order, Order.

Sri ANNARAO GANAMUKHI.—May I know whether these temples are not patterned after the old temples ?

Mr. SPEAKER.—That is a matter of detail, Sri Anna Rao.

ಶ್ರೀ ಎಂ. ಎಂ. ಪಾಟೀಲ್.—ಅಡೀಷನಲ್ ಸಿಬ್ಬಂದಿ ನೇಮಕ ಮಾಡಿದ ಮೇಲೆ ಈಗ ಕೆಲಸ ಎಷ್ಟು ಆಗಿದೆ?

Sri M. P. PATIL.—I have not received any report. But I expect they must have started the work seriously.

ಶ್ರೀ ಎಂ. ಎಂ. ಪಾಟೀಲ್—ಈ ಕೆಲಸ ಆದಷ್ಟು ತೀವ್ರ ಮುಗಿಸಲಕ್ಕೆ ಅಪ್ಪಣೆ ಕೊಡಿಸುತ್ತೀರಾ ?

Sri M. P. PATIAL.—I have already replied that instructions have been issued to complete the work within one year.

Residential Quarters for Ministers.

Q.—310. Sri G. SIVAPPA (Chitaldrug).—

Will the Government be pleased to state :—

(*a*) the number of residential quarters constructed for the Ministers at Bangalore ;

(*b*) the amount of outlay on each building including the site value ;

(*c*) the number of them that remain unoccupied and the reason therefor ?

A.—Sri H. K. VEERANNA GOWDH (Minister for Public Works).—

(*a*) Four.

(*b*) A-1 and A-2 type Quarters constructed at Jayamahal ;—

	Rs
A-1 type	... 1,02,887
A-2 type	... 95,076
Two 'A' type Quarters at 'Kumara Krupa'	... 17,856

(not including the site value as the site value has not yet been determined).

(*c*) One ; it has been reserved for the time being for the use of the Members of the Legislature in connection with the Sessions.

ಶ್ರೀ ಜಿ. ಶಿವಪ್ಪ.—ಜಯಮಹಲ್‌ನಲ್ಲಿರುವ (a) ಟೈಪು ಮತ್ತು (a) (2) ಟೈಪು ಈ ಎರಡು ಮನೆಗಳೂ ಸಹ ಖಾಲಿ ಇವೆ ಅಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದು ಮನೆಯಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಚೇರ್ಮನ್ ಇದ್ದಾರೆ. ಇನ್ನೊಂದು ಮನೆ ಖಾಲಿ ಇದೆ.

ಶ್ರೀ ಜಿ. ಶಿವಪ್ಪ.—ಸದಸ್ಯರಿಗೆ ಮೀಸಲಾಗಿಟ್ಟಿರುವ ಮನೆಯಲ್ಲಿ ಯಾರಾದರೂ ಸದಸ್ಯರು ಇದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳು ಇನ್ನು ಹೆಚ್ಚಾಗಿ ಬರುತ್ತಾರೆ ; ಆಗ ಬೇಕಾಗಬಹುದು ಎಂದು ಉಳಿಸಿಕೊಂಡಿದೆ.

Sri G. SIVAPPA.—Is it not a fact that these two houses are constructed for the purpose of Ministers residing in them ?

Mr. SPEAKER.—It has been given in the answer.

Sri G. SIVAPPA.—May I know Sir, why Ministers are not residing in these houses ?

Sri H. K. VEERANNA GOWDH.—There seems to be some confusion, Sir. The houses were built by the Trust Board and then Government thought it desirable to buy them for the use of Ministers. They were not built for the use of Ministers when they were built.

Sri G. SIVAPPA.—May I know whether it is not a fact that some of the Ministers in the old regime were residing in these two bungalows ?

Sri H. K. VEERANNA GOWDH.—They were residing.

Sri G. SIVAPPA.—May I know whether they have made any complaint that the two houses are not suitable for the residence of Ministers ?

Sri H. K. VEERANNA GOWDH.—That must be enquired into.

Sri G. DUGGAPPA.—To part (*a*) of the question "the number of residential quarters constructed for the Ministers at Bangalore", the answer given is "four".

ಟ್ರಸ್ಟ್‌ಬೋರ್ಡಿನವರು ಕಟ್ಟಿಸಿದರು ಎಂದು ಈಗ ತಾನೆ ತಾವು ಹೇಳಿದ್ದನ್ನು ನಂಬೋಣವೇ ?

ಶ್ರೀ ಎಚ್. ಕೆ ವೀರಣಗೌಡ.—ನಾನು ಹೇಳಿದ್ದರಲ್ಲಿ ವ್ಯತ್ಯಾಸವೇನೂ ಇಲ್ಲ. ಟ್ರಸ್ಟ್ ಬೋರ್ಡಿನವರು ಕಟ್ಟಿಸಿದರು, ಅನಂತರ ಮಿನಿಸ್ಟರುಗಳ ವಾಸಕ್ಕೆ ಕೊಂಡುಕೊಳ್ಳಬೇಕೆಂದು ಯೋಚನೆ ಮಾಡಲಾಯಿತು ಎಂದು ಹೇಳಿದೆ ನೆಂದು ಕಾಣುತ್ತದೆ.

Sri C. K. RAJAIAH SETTY.—When there was the simultaneous session of the Legislative Assembly and the Legislative Council last time, was this building kept for their use ?

Sri H. K. VEERANNA GOWDH.—It was kept ready and one or two members did reside.

ಶ್ರೀ ಎಚ್. ಜಿ. ನರಸಿಂಹೇಗೌಡ.—ಮಂತ್ರಿಗಳಿಗೆ ಕಟ್ಟಿರತಕ್ಕ ಮನೆಗಳಲ್ಲ ಮಂತ್ರಿಗಳು ಹೋಗಿ ವಾಸ ಮಾಡುವುದು ನ್ಯಾಯವಲ್ಲವೇ ?

ಅಧ್ಯಕ್ಷರು.—ಇದಕ್ಕೆ ಉತ್ತರ ಹೇಳಿದರು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇನ್ನು ಮೇಲಾದರೂ ಹೋಗಿ ಅಲ್ಲಿ ವಾಸಮಾಡುತ್ತಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಕಟ್ಟಡಗಳನ್ನು ಮಾರಬೇಕೆಂಬ ಉದ್ದೇಶವಿದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ರೀತಿ ಮಾರ ಬೇಕೆಂಬುದರ ಉದ್ದೇಶವೇನು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ಕಾರಕ್ಕೆ ಹಣ ಬರಲಿ ಎನ್ನುವುದು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹೆಣ ಹೂಳಿರತಕ್ಕ ಜಾಗದಲ್ಲಿ ಮನೆ ಕಟ್ಟಿರುವುದರಿಂದ ಮಂತ್ರಿಗಳು ಅಲ್ಲಿಗೆ ಹೋಗಲು ಹೆದರಿಕೊಳ್ಳುತ್ತಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೇನೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ಮನೆಗಳು ಮಂತ್ರಿಗಳು ವಾಸಮಾಡುವುದಕ್ಕೆ ಯೋಗ್ಯವಾಗಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ ಎಂದು ಯಾರು ಹೇಳುತ್ತಾರೆ ?

ಶ್ರೀ ಕೆ ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ ಏಕೆ ಹೋಗಲಲ್ಲ ?

ಶ್ರೀ ಎಚ್. ಕೆ ವೀರಣ್ಣಗೌಡ.—ಸಣ್ಣ ಪುಟ್ಟ ಮಕ್ಕಳು ಇರುತ್ತಾರೆ. ಪ್ರೈವಸಿರೀ ಸ್ಕೂಲು ಹತ್ತಿರದಲ್ಲಿ ಅಲ್ಲಿ ಇಲ್ಲ. ಈ ರೀತಿ ಅನೇಕ ತೊಂದರೆಗಳು ಇರುತ್ತವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮಂತ್ರಿಗಳು ಹೋಗಿ ಅಲ್ಲಿ ವಾಸವಾಗಿರುವುಕ್ಕೆ ತಾವು ಏನು ತೊಂದರೆಗಳನ್ನು ಹೇಳಿವಿರೋ ಆ ತೊಂದರೆಗಳು ಸದಸ್ಯರಿಗೂ ಇಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸದಸ್ಯರು ಮಕ್ಕಳು ಹೆಂಡಿರು ಎಲ್ಲರನ್ನೂ ಕರೆದುಕೊಂಡು ಬರುವುದಿಲ್ಲ. ಒಬ್ಬೊಬ್ಬರು ಕರೆದುಕೊಂಡು ಬಂದರೆ ಬೇರೆ ಕಡೆ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸದಸ್ಯರಿಗೆ ಈ ಕಟ್ಟಡ ಇದೆ ಎಂದು ಹೇಳಿದ್ದೀರಿ. ಇದಲ್ಲದೆ ಬೇರೆ ಕಟ್ಟಡ ಬಾಡಿಗೆಗೆ ತೆಗೆದುಕೊಂಡಿದ್ದೀರಾ ?

ಅಧ್ಯಕ್ಷರು.—ಅದು ಪ್ರಶ್ನೆ ಬೇರೆ ಆಯಿತು.

ಶ್ರೀ ಡಿ. ಎಚ್. ರುದ್ರಪ್ಪ.—ಈಗ ಕಟ್ಟಿಸಿರುವ ಕಟ್ಟಡಗಳಿಗೆ ನಷ್ಟವಾದರೆ ಯಾರು ಜವಾಬ್ದಾರರು ?

ಶ್ರೀ ಎಚ್ ಕೆ. ವೀರಣ್ಣಗೌಡ.—ಈಗ ಕಂಡೀಷನ್ ಏನೆಂದರೆ ಸೈಟ್ ವ್ಯಾಲ್ಯು ಮತ್ತು ಕಟ್ಟಡದ ಖರ್ಚು ಬಂದರೆ ಎಷ್ಟೋ ಆಷ್ಟೇ.

ಶ್ರೀ ಡಿ. ಎಚ್. ರುದ್ರಪ್ಪ.—ಅದರ ಪ್ರಕಾರ ಮಿನಿಸ್ಟರುಗಳು ಹೋಗಿ ಅಲ್ಲಿ ವಾಸಮಾಡುವುದು ಒಳ್ಳೆಯದಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯದ ಮಾತು.

Sri ANNA RAO GANAMUKHI.—May I know the price at which these houses were purchased by the Government

Sri H. K. VEERANNA GOWDH.—At cost.

Sri ANNA RAO GANAMUKHI.—What is the value of the land ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ಸಂದರ್ಭದಲ್ಲಿ ಲ್ಯಾಂಡ್ಸ್ ವ್ಯಾಲ್ಯು ನಿಗದಿಮಾಡಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಮಂತ್ರಿಗಳು ಅಲ್ಲಿ ಹೋಗಿ ವಾಸಮಾಡುವುದಕ್ಕೆ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ಸ್ಕೂಲು ಇಲ್ಲ ಎಂದು ಹೇಳಿದರು. ಹಾಗಾದರೆ ಅಲ್ಲಿ ಸುತ್ತಮುತ್ತಲೂ ಇನ್ನೂ ಅನೇಕ ಮನೆಗಳು ಇವೆಯೋ ಇಲ್ಲವೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಸ್ಥಳಕ್ಕೆ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಈಗ ಈ ಕಟ್ಟಡಗಳನ್ನು ಮಾರಬೇಕೆಂದು ಹೇಳುತ್ತಾ ಇದ್ದೀರಿ. ಕಡಮೆಬೆಲೆಗೆ ಮಾರುತ್ತೀರೋ ಅಥವಾ ಟೆಂಡರ್ ಕರೆಯುತ್ತಿರೋ ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಕೆ. ಎ. ಪಾಟೀಲ್.—ಎಷ್ಟು ಜನ ಮಂತ್ರಿಗಳು ಸರ್ಕಾರಿ ಕ್ವಾರ್ಟ್ರ್ಸ್‌ನಲ್ಲಿ ಇದ್ದಾರೆ ?

ಅಧ್ಯಕ್ಷರು.—ಅದು ಬೇರೆ ಪ್ರಶ್ನೆ ಆಯಿತು.

Teachers appointed under the Central Scheme.

Q.—333 Sri M. LINGE GOWDA (Kanakapura).—

Will the Government be pleased to state :—.

(*a*) the number of primary school teachers appointed in the State under the Central Scheme ;

(*b*) the difference between the salary drawn by the teachers appointed by the Education Department and that drawn by the teachers appointed under the Central Scheme :

(*c*) whether it is a fact that the teachers appointed under the Central Seheme have been deprived of promotion while those appointed by the Education Department are preferred for promotion ;

(*d*) whether the teachers appointed under the Central Scheme are given chances on the basis of their seniority to work in middle school ?

A.—Sri V. VENKATAPPA (Minister for Education).—

(*a*) 2,402 :

(*b*)—

	Before revision	*After revision*
Pay of Primary School Teachers appointed by the Education Department.	Rs. 25 in grade 25-1-30-1-45	Rs. 40-1-50-2-60 FOR non-S.S.L.C. Untrained teachers, Rs. 40-2-50-3-80 for non-S. S. L. C. trained teachers.
Pay of Primary School Teachers appointed under the Central Scheme.	Rs. 40 in grade 40-2-50-3-80	Rs. 50-3-80-4-100 for teachers with S.S.L.C. qualification.

(*c*) No.

(*d*) Yes.

ಶ್ರೀ ಎಂ. ಲಿಂಗೇಗೌಡ.—ಕೇಂದ್ರ ಸರ್ಕಾರದ ಸ್ಕೇಲ್ಸು ಇಂಥಿಂಥಾದ್ದು ಎಂದು ಕೊಟ್ಟಿದ್ದೀರಿ. ಅವುಗಳೆಲ್ಲಕ್ಕೂ ಅವರೇ ಪೂರ್ತಿ ಹಣ ಕೊಡುತ್ತಾ ಇದ್ದಾರೆಯೇ ?

ಶ್ರೀ ವಿ. ವೆಂಕಟಪ್ಪ.—ಪೂರ್ತಿ ಅಲ್ಲ. ಶೇಕಡ 50.

ಶ್ರೀ ಎಂ ಲಿಂಗೇಗೌಡ.—ಅವರಿಗೆ ನಮ್ಮ ಡಿಪಾರ್ಟ್‌ಮೆಂಟಿನ ಕಾನೂನು ಪ್ರಕಾರ ಟ್ರಾನ್ಸ್‌ಫರ್, ಪ್ರಮೋಷನ್ ಇವೆಲ್ಲವೂ ವಿಶೇಷವಾಗಿ ಅನ್ವಯಿಸುತ್ತದೆಯೇ ?

ಶ್ರೀ ವಿ. ವೆಂಕಟಪ್ಪ.—ಅನ್ವಯಿಸುತ್ತದೆ.

Sri G. B. SHANKARA RAO.—Does this information pertain to old Mysore?

Sri V. VENKATAPPA.—The whole of the State.

ಶ್ರೀ ಜಿ. ಬಿ. ಶಂಕರರಾವ್.—ಬೊಂಬಾಯಿ ಕರ್ನಾಟಕದಲ್ಲಿ ಪ್ರಾಥಮಿಕ ಶಾಲೆಗಳು ಎಷ್ಟಿವೆ ?

ಅಧ್ಯಕ್ಷರು.—ಇದು ಶಾಲೆಯ ಪ್ರಶ್ನೆ ಅಲ್ಲ. This is a different question ?

ಶ್ರೀ ಎಂ. ಲಿಂಗೇಗೌಡ.—ಈ ಸ್ಕೇಲ್ ಮಂಜೂರಾಗಿದೆಯೇ ?

ಶ್ರೀ ವಿ. ವೆಂಕಟಪ್ಪ.—ಹೌದು.